ತಾಲ್ಲೂಕಿಗೆ ಐವತ್ತು ಸಾವಿರ ರೂ.ಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ ಎನ್ನತಕ್ಕಂಥ ವಿಷಯ ಹಿಂದೆ ಪತ್ರಿಕೆಗಳಲ್ಲಿ ಬಂದಿದೆ. ತಾವು ಏನು ರಂಗಮಂದಿರ ನಿರ್ಮಾಣಕ್ಕೆ 50 ಸಾವಿರ ರೂ.ಗಳನ್ನು ನಿಗದಿ ಮಾಡಿದಿರಿ ಈ ಹಣ ಯಾವುದಕ್ಕೂ ಸಾಲುವುದಿಲ್ಲ. ಏಕೆಂದರೆ, ಆಶ್ರಯ ಮನೆಗಳಿಗೆ ಇಪ್ಪತ್ತರಿಂದ ಇಪ್ಪತ್ತೈದು ಸಾವಿರ ರೂ.ಗಳನ್ನು ಕೊಡುವಾಗ, ರಂಗ ಮಂದಿರಕ್ಕೆ ಐವತ್ತು ಸಾವಿರ ರೂ.ಗಳನ್ನು ಕೊಟ್ಟರೆ ಬಹಳ ಕಡಿಮೆಯಾಗುತ್ತದೆ. ಕೊನೇಪಕ್ಷ ಒಂದು ತಾಲ್ಲೂಕಿಗೆ ಐದು ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಒಂದು ರಂಗಮಂದಿರವನ್ನು ಕಟ್ಟಿಕೊಟ್ಟರೆ, ಗ್ರಾಮೀಣ ಪ್ರದೇಶದಲ್ಲಿರುವ ಕಲಾವಿದರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆಂದು ನಾನು ಇಲ್ಲಿ ಹೇಳಬಯಸುತ್ತೇನೆ.

ಶ್ರೀಮತಿ ರಾಣಿ ಸತೀಶ್: ಇದರಲ್ಲಿ ಬಯಲು ರಂಗಮಂದಿರ ಮತ್ತು ಜಿಲ್ಲಾ ರಂಗಮಂದಿರ ಬೇರೆ ಬೇರೆ ಇದೆ. ಬಯಲು ರಂಗಮಂದಿರಗಳನ್ನು ಕಟ್ಟುವುದಕ್ಕೆ ಒಂದು ತಾಲ್ಲೂಕಿಗೆ ಮೊದಲನೇ ಹಂತದಲ್ಲಿ ಐವತ್ತು ಸಾವಿರ ರೂ.ಗಳು ಹಾಗೂ ಎರಡನೇ ಹಂತದಲ್ಲಿ ಐವತ್ತು ಸಾವಿರ ರೂ.ಗಳು ಒಟ್ಟು ಒಂದು ಲಕ್ಷ ರೂ.ಗಳನ್ನು ಕೊಡುತ್ತೇವೆ. ಬಯಲು ರಂಗಮಂದಿರಗಳು ಜಿಲ್ಲೆಗೆ ಒಂದು ರಂಗಮಂದಿರದ ವ್ಯಾಪ್ತಿಯಲ್ಲಿ ಬರುತ್ತವೆ. ನಾವು ಕೊಡತಕ್ಕಂಥ ಹಣ ಐವತ್ತು ಸಾವಿರ ರೂ.ಗಳು ಅಲ್ಲ ಒಂದು ಲಕ್ಷ ರೂ.ಗಳು. ಮುಂದೆ ನಾವು ಇದನ್ನು ಇನ್ನು ಹೆಚ್ಚಿಸುವುದಕ್ಕೆ ನಾನು ಖಂಡಿತವಾಗಿ ಪ್ರಯತ್ನಿಸುತ್ತೇನೆ.

ಬೆಂಗಳೂರು ದೂರದರ್ಶನದಲ್ಲಿ ಕನ್ನಡ ಕಾರ್ಯಕ್ರಮ.

2 (147)

ಶ್ರೀ ರಾಮಲಿಂಗಾರೆಡ್ಡಿ(ಜಯನಗರ): ಮಾನ್ಯ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದೂರದರ್ಶನದಲ್ಲಿ ಇತ್ತೀಚೆಗೆ ಕೇಂದ್ರ ಸರ್ಕಾರವು ಕನ್ನಡ ಕಾರ್ಯಕ್ರಮಗಳ ವೇಳೆಯನ್ನು ಕಡಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಪ್ರೊ ಬಿ.ಕೆ. ಚಂದ್ರಶೇಖರ್(ವಾರ್ತಾ ಸಚಿವರು):

ಅ) ಬಂದಿದೆ.

ಆ) ಈ ಸಂಬಂಧದಲ್ಲಿ ಕೇಂದ್ರ ಸರ್ಕಾರ ವಾರ್ತಾ ಸಚಿವರಿಗೆ ಮಾನ್ಯ ಮುಖ್ಯಮಂತ್ರಿಗಳು ಪತ್ರ ಬರೆದಿದ್ದಾರೆ.

ಶ್ರೀ ರಾಮಲಿಂಗಾರೆಡ್ಡಿ: ಬೆಂಗಳೂರು ದೂರದರ್ಶನದಲ್ಲಿ ಇತ್ತೀಚೆಗೆ ಕೇಂದ್ರ ಸರ್ಕಾರವು ಕನ್ನಡ ಕಾರ್ಯಕ್ರಮಗಳಿಗೆ ಸಮಯವನ್ನು ಐದೂವರೆ ಗಂಟೆಗೆ ಇಳಿಸಿದ್ದಾರೆ, ಇದನ್ನು ಇನ್ನೂ ಜಾಸ್ತಿ ಮಾಡುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಕೆಲವು ಖಾಸಗಿ ಟಿ.ವಿ.ಗಳು ಕೂಡ ಕನ್ನಡ ಕಾರ್ಯಕ್ರಮಗಳನ್ನು ಬಿತ್ತರಿಸುವುದಕ್ಕೆ ಮುಂದೆ ಬಂದಿವೆ, ಇಂಥ ಸನ್ನಿವೇಶ ಇರುವಾಗ ದೂರದರ್ಶನದಲ್ಲಿ ಕನ್ನಡ ಕಾರ್ಯಕ್ರಮಗಳು ಪ್ರಸಾರವಾಗುವ ಸಮಯವನ್ನು ಕಡಿತಗೊಳಿಸುವುದು ತಪ್ಪು. ಇದರ ಬದಲು ಪ್ರಸಾರದ ಸಮಯವನ್ನು ಹೆಚ್ಚು ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಪ್ರೊ. ಬಿ.ಕೆ.ಚಂದ್ರಶೇಖರ್: ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ರಾಮಲಿಂಗಾರೆಡ್ಡಿಯವರ ಪ್ರಶ್ನೆ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಎರಡನೆಯ ಪ್ರಶ್ನೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಕೇಂದ್ರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಮಂತ್ರಿಗಳಿಗೆ ಈಗಾಗಲೇ ಇದಕ್ಕೆ ಸಂಬಂಧಪಟ್ಟಂತೆ 15ನೇ ತಾರೀಖಿಗೆ ಪತ್ರವನ್ನು ಬರೆದಿದ್ದಾರೆ. ನಾನು ಕೂಡ ಈ ವಿಚಾರದಲ್ಲಿ ಪತ್ರವನ್ನು ಬರೆದಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಮುಖ್ಯಮಂತ್ರಿಗಳು ಕೇಂದ್ರಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ ಬಹಳ ಸಂತೋಷ. ಈಗ 91/2 ಗಂಟೆ ಡಿಡಿ-1 ರಲ್ಲಿ ಅದನ್ನು ಶೇಕಡ 85ರಷ್ಟು ಜನ ಆ ಕಾರ್ಯಕ್ರಮವನ್ನು ನೋಡುತ್ತಾರೆ. ಅದನ್ನು 5 1/2 ಗಂಟೆಗೆ ಇಳಿಸಿ ಕಡಿತವನ್ನು ಮಾಡಿದ್ದಾರೆ. ಅದನ್ನು ಇನ್ನು ಹೆಚ್ಚಿಗೆ ಮಾಡಬೇಕೇ ಹೊರತು ಕಡಿಮೆ ಮಾಡಬಾರದು. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ಮಾಡಬೇಕು.

ಅಧ್ಯಕ್ಷರು: ಆ ಪತ್ರದಲ್ಲಿ ನೀವು ಮೆನ್‌ಷನ್ ಮಾಡಿ ಈ ರೀತಿಯಾಗಿ ಸಮಯವನ್ನು ಕಡಿಮೆ ಮಾಡುತ್ತಿದ್ದಾರೆ ಸಮಯ ಹೆಚ್ಚಿಗೆ ಎಂದು ಬರೆಯಬೇಕು.

ಪ್ರೊ.ಬಿ.ಕೆ.ಚಂದ್ರಶೇಖರ್: ಅದರಲ್ಲಿ ವಾರ್ತಾ ಸಮಯವನ್ನು ಬದಲಾವಣೆ ಮಾಡಿದ್ದು 6-30 ರಿಂದ 7-00 ಗಂಟೆ, ಮತ್ತೊಂದು ಕಾರ್ಯಕ್ರಮವನ್ನು 7-30 ರಿಂದ 8-00 ಗಂಟೆಯವರೆಗೂ ಅದನ್ನು 8-00 ರಿಂದ 8-30 ಮಾಡಿದ್ದಾರೆ. ಇದರ ಬಗ್ಗೆ ನಮ್ಮ ಗಮನಕ್ಕೆ ತಂದಿದ್ದಾರೆ. ಈ ಎರಡು ವಿಷಯಕ್ಕೆ ಸಂಬಂಧಪಟ್ಟಂತೆ ನನ್ನ ಗಮನಕ್ಕೆ ಬಂದಿರುವ ಮಾಹಿತಿ ಪ್ರಕಾರ ಕೇಂದ್ರದ ವಾರ್ತಾ ಮಂತ್ರಿಯವರು ಸಹಾನುಭೂತಿಯಿಂದ ಪರಿಶೀಲಿಸಿ ಉತ್ತರವನ್ನು ಕೊಡುತ್ತಾರೆ. ಇಡೀ ದೇಶದಲ್ಲಿ ಡಿಡಿ-1 ರಲ್ಲಿ ಬದಲಾವಣೆಯನ್ನು ತಂದಿದ್ದಾರೆ. ಇದು ನಿಮಗೆ ಮಾತ್ರವಲ್ಲ ಇಡೀ

ದೇಶಕ್ಕೆ ಮಾಡಲಾಗಿದೆ ಎಂದು ಒಂದು ನೆಪವನ್ನು ಹೇಳುತ್ತಾರೆ. ಬೇರೆ ರಾಜ್ಯಗಳಿಂದಲೂ ಕೂಡ ಈ ರೀತಿಯ ರೆಪ್ರೆಸೆಂಟೇಶನ್ ಕೊಡುತ್ತಿರಬಹುದು ಎಂದು ನನಗನಿಸುತ್ತದೆ. ನಾವು ಇದನ್ನು ಖಂಡಿತವಾಗಿ ಒತ್ತಾಯ ಮಾಡಿ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಪ್ರಮುಖವಾಗಿ ಪ್ರಶ್ನೆ-1ರಲ್ಲಿ ಕೇಳುವಾಗಲೇ ಕೇಂದ್ರಸರ್ಕಾರದಿಂದ ಕನ್ನಡ ಕಾರ್ಯಕ್ರಮದ ಸಮಯ ಕಡಿತದ ಬಗ್ಗೆ ಎಂದು ಕೇಳಬಹುದಾಗಿತ್ತು. ಕೇಂದ್ರಸರ್ಕಾರ ಇಲ್ಲಿ ನೇರವಾಗಿ ಯಾವುದೇ ರೀತಿಯ ಪತ್ರವನ್ನು ಬರೆದು ದೂರದರ್ಶನದ ಜೊತೆಗೆ ಪತ್ರವ್ಯವಹಾರವಾಗಿರುವ ಬಗ್ಗೆ ವ್ಯವಸ್ಥೆ ಇಲ್ಲ. ಇದೊಂದು ಇಂಡಿಪೆಂಡೆಂಟ್ ಬಾಡಿ ಆಗಿರುವುದರಿಂದ ಅವರು ಇಡೀ ದೇಶದಲ್ಲಿರುವಂತಹ ಎಲ್ಲಾ ಸ್ಥಳೀಯ ಭಾಷೆಗಳಲ್ಲಿರುವಂತಹ ಕಾರ್ಯಕ್ರಮಗಳಿಗೂ 8 ರಿಂದ 8-30 ವರೆಗೆ ಇರುವಂತಹ ಸಮಯವನ್ನು ಇಡೀ ದೇಶದಲ್ಲಿ ಕಡಿತವನ್ನು ಮಾಡಿ ಅದರಲ್ಲಿ ನ್ಯಾಷನಲ್ ಪ್ರೋಗ್ರಾಮ್‌ನ್ನು ಕೊಡುವಂತಹ ವ್ಯವಸ್ಥೆಯಾಗಿದೆ. ಕೇಂದ್ರಸರ್ಕಾರ ಯಾವುದೇ ದೂರದರ್ಶನಕ್ಕೆ ಪತ್ರವನ್ನು ಬರೆದಂತಹದ್ದು ಇಲ್ಲ. ಪತ್ರವನ್ನು ಬರೆದದ್ದು ಪ್ರಸಾರ ಭಾರತಿಗೆ ಮಾತ್ರ. ಆದ್ದರಿಂದ ಸನ್ಮಾನ್ಯ ಸಚಿವರು ಈ ವಿಚಾರದಲ್ಲಿ ಪ್ರಸಾರ ಭಾರತಿಗೆ ಪತ್ರವನ್ನು ಬರೆಯಬೇಕಾಗಿದೆಯೇ ಹೊರತು ಕೇಂದ್ರಸರ್ಕಾರ ಇದರಲ್ಲಿ ಯಾವುದೇ ರೀತಿಯ ಮಧ್ಯಸ್ಥಿಕೆಯಾಗಿರುವಂತದ್ದು ಏನೂ ಇಲ್ಲ.

ಅಧ್ಯಕ್ಷರು: ಇದು ಮಾನ್ಯ ಮಂತ್ರಿಗಳ ಕೈಕೆಳಗಡೆ ಬರುವುದರಿಂದ that is not the question here. ಕನ್ನಡ ಕಾರ್ಯಕ್ರಮಗಳ ಪ್ರಸಾರ ಕಡಿಮೆಯಾಗುತ್ತಿದೆ. ಮೊದಲು ಎಷ್ಟು ಸಮಯವನ್ನು ಕಾರ್ಯಕ್ರಮಕ್ಕಾಗಿ ನಿಗದಿಪಡಿಸಲಾಗಿತ್ತು ಮತ್ತು ಹೆಚ್ಚಿಗೆ ಸಮಯವನ್ನು ಕೊಡಬೇಕೆಂದು ನೀವು ಹೇಳುತ್ತಿದ್ದೀರಿ, ಮಾನ್ಯ ಸಚಿವರು ಪತ್ರವನ್ನು ಬರೆದಿದ್ದಾರೆ. ಪ್ರಸಾರ ಭಾರತಿಗೆ ಪತ್ರ ಹೋದರೆ ಅವರು ಮಂತ್ರಿಗಳಿಗೆ ಕಳುಹಿಸಿಕೊಡುತ್ತಾರೆ.

ಉದ್ಯೋಗ ವಿನಿಮಯ ಕಚೇರಿಯಲ್ಲಿ ನೋಂದಣಿ

3 (347)

ಶ್ರೀ. ಅಂಗಾರ. ಎಸ್.(ಸೂಳ್ಯ): ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಉದ್ಯೋಗ ವಿನಿಮಯ ಕೇಂದ್ರದಲ್ಲಿ ಒಟ್ಟು ಎಷ್ಟು ಜನರ